ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಶ್ರೀರಂಗಪಟ್ಟಣ

ಸಿ.ಸಿ.344/2013

ಸಿ.ಡಬ್ಲ್ಯೂ : 14

ಪಿ.ಡಬ್ಲ್ಯೂ : 1

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 07.01.2025**

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ

ನಾನು ದ್ವಿತೀಯ ಪಿ.ಯು.ಸಿ ವರೆಗೆ ಓದಿರುತ್ತೇನೆ. Raid squard ರವರಾದ ನೀವು ಪರಸ್ಪರ ಶೋಧನಾ ಮಹಜರ್ ಅನ್ನು ತಯಾರಿಸಿಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸ್ಥಳದಲ್ಲಿ ಮಹಜರ್ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಇರುವ ಒಕ್ಕಣೆ ನನಗೆ ತಿಳಿದಿರುತ್ತದೆ. ನಿಮ್ಮ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಸ್ವವರದಿಯಯನ್ನು ತಯಾರಿಸಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಂಚರನ್ನು ಯಾರು ಸಂಪರ್ಕ ಮಾಡಿದರು ಎನ್ನುವ ಪ್ರಶ್ನೆಗೆ ಸಾಕ್ಷಿ ಪಿ.ಎಸ್.ಐ ರವರು ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪಿ.ಎಸ್.ಐ ರವರಿಗೆ ಮೂಲ ಮಾಹಿತಿ ಬಂದಾಗ ಸಮಯ ಸಂಜೆ 4.30 ಗಂಟೆ ಆಗಿತ್ತು. ಪೆಟ್ಟಿ ಅಂಗಡಿಯಲ್ಲಿ ನಾವು ಹಣವನ್ನು ಜಪ್ತಿ ಮಾಡಿರುವುದಿಲ್ಲ. ಪೆಟ್ಟಿ ಅಂಗಡಿಯಲ್ಲಾಗಲಿ ಅಥವಾ ಪೆಟ್ಟಿ ಅಂಗಡಿಯಲ್ಲಿ ಇದ್ದ ವ್ಯಕ್ತಿಯ ಹತ್ತಿರ ಹಣವನ್ನು ಏನಾದರೂ ಜಪ್ತಿ ಮಾಡಿರುತ್ತೀರಾ ಎನ್ನುವ ಪಶ್ನೆಗೆ ಸಾಕ್ಷಿ ಅದರ ಬಗ್ಗೆ ನಾವು ವಿಚಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಘಟನೆ ನಡೆದ ದಿನದಂದು ಘಟನಾ ಸ್ಥಳದಲ್ಲಿ ಸಾಮಾನ್ಯ ವಾತವರಣ ಇದ್ದು ಸಾರ್ಜನಿಕರು ಎಂದಿನಂತೆ ಓಡಾಡಿಕೊಂಡು ಇದ್ದರು ಎಂದರೆ ಸರಿ. ಪೆಟ್ಟಿ ಅಂಗಡಿಯಲ್ಲಿ ಬೇರೆ ದಾಸ್ತಾನು ಏನು ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೆಟ್ಟಿ ಅಂಗಡಿಯಲ್ಲಿ ಟೀ ಕಾಫಿ ಮಾರಾಟ ಮಾಡುತ್ತಿದ್ದು, ಎಣ್ಣೆ ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ನಿಪಿ.2 ಮತ್ತು 3 ಫೋಟೋಗಳಲ್ಲಿ ಕಾಫೀ ಟೀ ಮಾರಾಟ ಮಾಡುವ ವಸ್ತುಗಳು ಹಾಗೂ ಎಣ್ಣೆ ಹಾಗೂ ಮಧ್ಯವು ಕಾಣಿಸುತ್ತಿಲ್ಲ ಎಂದರೆ ಸಾಕ್ಷಿಯು ಫೋಟೋದಲ್ಲಿ ಕಾಣಿಸುತ್ತಿಲ್ಲ ಆದರೆ ಇದೆ ಎಂದು ನುಡಿಯುತ್ತಾರೆ. ನಾವು ಆ ದಿನ ಯಾವುದೇ ದಾಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಪೊಲೀಸ್ ಸಿಬ್ಬಂದಿಯವರಿಗೆ ಯಾವುದೇ ಹಲ್ಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನಾಂಕದಂದು ಗ್ರಾಮ ಪಂಚಾಯಿತಿ ಚುನಾವಣೆ ಇತ್ತು. ಆ ದಿನ ಘಟನಾ ಸ್ಥಳದಲ್ಲಿ ಯಾವುದೇ ಮಧ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಮ್ಮ ಮೇಲೆ ಯಾವುದೇ ಹಲ್ಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆಯನ್ನು ತೋರಿಸುವ ಸಲುವಾಗಿ ಚುನಾವಣೆ ಇದ್ದ ಕಾರಣ ಆರೋಪಿತರ ವಿರುದ್ದ ನಾವು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮನೆಗಳು ಇದ್ದು ಅಲ್ಲಿ ಜನ ಸಂದಣಿ ಇತ್ತು ಎಂದರೆ ಸರಿಯಲ್ಲ. ನಾನು ರಾಜಕೀಯ ಪ್ರೇರಿತವಾಗಿ ಹಾಗೂ ಮೇಲಾಧಿಕಾರಗಳ ಮಾತನ್ನು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೈದ್ಯರ ಮುಂದೆ ನನಗೆ ಹಲ್ಲೆ ಆಗಿದೆ ಎಂದು ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.